ISHUDHI - Kannada Monthly. Registered No. CPMG/KA/BGS/82/2012-14. RNI No. 69453/97.
Licensed to post without prepayment on 11th of every month at MBC, BG GPO, BANGALORE. License No: WPP-224

Since 1946

# ಶ್ರೀ ವಸಂತ ಕಾಫಿ ವರ್ಕ್ಸ್

## ವಿಶ್ವಾಸಪೂರ್ಣ ಸೇವೆಯ 6 ದಶಕಗಳು



ಶ್ರೀ ಕೆ.ವಿ.ಕೃಷ್ಣಮೂರ್ತಿ



ಶ್ರೀ ವಸಂತ ವಲ್ಲಭರಾಯ ಸ್ವಾಮಿ

ಬೆಂಗಳೂರಿನ ನಾಗರಿಕರಿಗೆ ಮತ್ತು ಇಲ್ಲಿನ ಸಾವಿರಾರು ಹೋಟೆಲುಗಳಲ್ಲಿ ಕಾಫಿಯ ರುಚಿ ಸವಿಯುವ ಲಕ್ಷಾಂತರ ಊರಪರವೂರ ಗ್ರಾಹಕರಿಗೆ ಶ್ರೀ ವಸಂತ ಕಾಫಿಯ ರುಚಿ ಚಿರಪರಿಚಿತ. ನಾಡಿನ ಮನೆಮನೆಗಳಲ್ಲಿ ಇಂದು ಹೆಸರಾಗಿರುವ, ಮನಮನಗಳನ್ನು ಅರಳಿಸುವ ರುಚಿಯ, ಮನೆಮಂದಿಯ ಮನಗೆದ್ದಿರುವ ಶ್ರೀ ವಸಂತ ಕಾಫಿ ತನ್ನ 66 ವರ್ಷಗಳನ್ನು ಸಂಪೂರ್ಣಗೊಳಿಸಿ ಮುನ್ನಡೆಯುತ್ತಿದೆ. ಈ ಆರೂವರೆ ದಶಕಗಳ ಇತಿಹಾಸದಲ್ಲಿ ಶ್ರೀ ವಸಂತ ಕಾಫಿ ವರ್ಕ್ಸ್ ಸಂಸ್ಥೆ ಬೆಳೆದು ಬಂದ ಬಗೆಯೇ ರೋಚಕ.

ಆ ವೇಳೆಗಾಗಲೇ ಹೊಸೂರು ರಸ್ತೆಯ ಕೋನಪ್ಪನ ಅಗ್ರಹಾರದಿಂದ ಗ್ರಾಮಕರಣೀಕ ಶ್ರೀ ವಲ್ಲಭರಾಯಪ್ಪ ಅವರ ಕುಟುಂಬ ಬೆಂಗಳೂರಿನ ವಿಶ್ವೇಶ್ವರಪುರಂಗೆ ಬಂದು ನೆಲೆಯಾಗಿತ್ತು. ಅವರ ಮಕ್ಕಳಾದ ಶ್ರೀ ಕೆ.ವಿ.ರಾಮಚಂದ್ರ ಮತ್ತು ಶ್ರೀ ಕೆ.ವಿ.ಕೃಷ್ಣಮೂರ್ತಿಯವರ ಬಾಲ್ಯಕಾಲದಲ್ಲೇ ಶ್ರೀ ವಲ್ಲಭರಾಯಪ್ಪನವರು ಕಾಲವಾದರು. ತಾಯಿಯ ಪೋಷಣೆಯಲ್ಲಿ ಮಕ್ಕಳು ದೇಶಭಕ್ತಿ ಮತ್ತು ಸ್ವಾಭಿಮಾನಗಳನ್ನು ಮೈಗೂಡಿಸಿಕೊಂಡು ಬೆಳೆದರು.

ಅದು 1946ನೆಯ ಇಸವಿ. ಭಾರತದ ಸ್ವಾತಂತ್ರ್ಯ ಹೋರಾಟ ಅತ್ಯಂತ ತೀವ್ರವಾಗಿದ್ದ ಕಾಲ. ಶ್ರೀ ಕೆ.ವಿ.ಕೃಷ್ಣಮೂರ್ತಿಯವರು ತೀವ್ರತೆ ಪಡೆದುಕೊಳ್ಳುತ್ತಿದ್ದ ಕ್ವಿಟ್ ಇಂಡಿಯಾ ಮೂವ್‌ಮೆಂಟ್ ಸೇರುವುದಕ್ಕೆ ಉತ್ಸುಕರಾಗಿದ್ದರು. ಆದರೆ ಸೋದರನನ್ನು ಸಮರಾಂಗಣಕ್ಕೆ ಕಳುಹಿಸಲು ಮನಸ್ಸಾಗದೆ ಶ್ರೀ ಕೆ.ವಿ.ರಾಮಚಂದ್ರರವರು ವಿಶ್ವೇಶ್ವರಪುರಂ ವೃತ್ತದಲ್ಲಿದ್ದ ತಮ್ಮ ಮಳಿಗೆಯಲ್ಲಿ ಕಾಫಿ ಉದ್ಯಮವೊಂದನ್ನು ಸ್ಥಾಪಿಸಲು ಯೋಜಿಸಿದರು. ಮನೆ ದೇವರಾದ ಶ್ರೀ ವಸಂತ ವಲ್ಲಭರಾಯಸ್ವಾಮಿಯ ಹೆಸರಿನಲ್ಲಿ ಶ್ರೀ ವಸಂತ ಕಾಫಿ ಉದ್ಯಮ ಸಂಸ್ಥೆ 1946 ಫೆಬ್ರುವರಿ 10ರಂದು ಅಸ್ತಿತ್ವಕ್ಕೆ ಬಂತು.

ಪ್ರಾರಂಭದಲ್ಲಿ ಹುರಿದ ಕಾಫಿ ಬೀಜವನ್ನು ಖರೀದಿಸುತ್ತಿದ್ದು ಪುಡಿ ಮಾಡಿ ಮಾರುಕಟ್ಟೆಗೆ ಒದಗಿಸಲಾಗುತ್ತಿತ್ತು. ಕ್ರಮೇಣ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಕಾಫಿ ಪುಡಿಯನ್ನು ನೀಡುವ ಉದ್ದೇಶದಿಂದ ಸ್ವಂತದ ಯಂತ್ರೋಪಕರಣಗಳನ್ನು ಸ್ಥಾಪಿಸಿ ಸ್ವತಂತ್ರವಾಗಿ ಉತ್ಪಾದನೆ ಮತ್ತು ಮಾರಾಟ ಪ್ರಾರಂಭವಾಯಿತು.

ದಿನೇ ದಿನೇ ಶ್ರೀ ವಸಂತ ಕಾಫಿ ಜನಮನ ಸೆಳೆಯಿತು. ಮನ ಅರಳಿಸುವ ಪರಿಮಳ, ನಾಲಿಗೆಯಲ್ಲಿ ನೀರೂರಿಸುವ ಸ್ವಾದ ಗ್ರಾಹಕರನ್ನು ಆಕರ್ಷಿಸಿತು. ಆ ಹೊತ್ತಿಗಾಗಲೇ ಶಂಕರಪುರಂನಲ್ಲಿ ಬ್ರಾಹ್ಮಣರ ಕಾಫಿ ಬಾರ್ ಪ್ರಾರಂಭಿಸಿದ್ದ ಶ್ರೀ ಕೆ.ಎನ್.ನಾಗೇಶ್ವರ ಅಡಿಗರು ತಮ್ಮ ಹೋಟೆಲಿಗೆ ಶ್ರೀ ವಸಂತ ಕಾಫಿ ಪುಡಿಯ ಆರ್ಡರ್ ನೀಡುವುದರೊಂದಿಗೆ ಹೋಟೆಲು ಉದ್ಯಮಕ್ಕೆ ಶ್ರೀ ವಸಂತ ಕಾಫಿಯ ಪೂರೈಕೆ ಪ್ರಾರಂಭವಾಯಿತು. ತನ್ನ ಆಶಯದಂತೆ ಉತ್ತಮ ಗುಣಮಟ್ಟದ ಕಾಫಿಪುಡಿಯನ್ನು ಅಪೇಕ್ಷಿಸುತ್ತಿದ್ದ ಶ್ರೀ ನಾಗೇಶ್ವರ ಅಡಿಗರು, ಶ್ರೀ ವಸಂತ ಕಾಫಿಯ ಗುಣಮಟ್ಟದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಹೊಸ ಹೋಟೆಲು ಪ್ರಾರಂಭಿಸುತ್ತಿದ್ದ ತನ್ನ ಸ್ನೇಹಿತರು ಮತ್ತು ಬಂಧುಗಳಿಗೆ ಶ್ರೀ ವಸಂತ ಕಾಫಿಯನ್ನು ಪರಿಚಯಿಸಿ ಶಿಫಾರಸು ಮಾಡುವ ಮೂಲಕ ಸಂಸ್ಥೆಗೆ ಬೆಂಬಲ ನೀಡಿದರು.



ಬೆಂಗಳೂರು ಬೆಳೆದಂತೆ ಪ್ರಗತಿ ಸಾಧಿಸಿದ ಹೋಟೆಲು ಉದ್ಯಮ ನಗರದಾದ್ಯಂತ ವ್ಯಾಪಿಸುತ್ತಾ, ನೂರಾರು ಹೊಸ ಹೋಟೆಲುಗಳು ಆರಂಭವಾಗುತ್ತಿದ್ದಂತೆ ಹೊಸ ಹೋಟೆಲುಗಳ ಮೂಲಕ ನಗರದ ಮೂಲೆಮೂಲೆಯ ಗ್ರಾಹಕರನ್ನು ತಲುಪಿದ ಶ್ರೀ ವಸಂತ ಕಾಫಿ ಬಳಕೆದಾರರ ಮನಗೆದ್ದಿತಲ್ಲದೆ ಮನೆಮನೆಗಳ ಅಡುಗೆಕೋಣೆಯಲ್ಲಿ ಸುಸ್ಥಿರ ಸ್ಥಾನ-ಮಾನಗಳನ್ನು ಪಡೆಯಿತು. ಜನರ ರುಚಿ ಮತ್ತು ಅಭಿರುಚಿಗೆ ಅನುಗುಣವಾಗಿ ಅತ್ಯುತ್ತಮ ವೈವಿಧ್ಯಮಯ ಸ್ವಾದಗಳ ಕಾಫಿಪುಡಿಯನ್ನು ಒದಗಿಸುತ್ತಿದ್ದ ಸಂಸ್ಥೆಯು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಪ್ರಗತಿಪಥದಲ್ಲಿ ಮುನ್ನಡೆ ಸಾಧಿಸಿತು.

ಇತ್ತೀಚೆಗೆ ಸಂಸ್ಥೆಯ ನಿರ್ವಹಣಾಸೂತ್ರವನ್ನು ಕೈಗೆತ್ತಿಕೊಂಡಿರುವ ಶ್ರೀ ಕೆ.ವಿ.ಕೃಷ್ಣಮೂರ್ತಿಯವರ ಮಕ್ಕಳಾದ ಶ್ರೀ ಕೆ. ಅನಂತರಾಮು ಮತ್ತು ಶ್ರೀ ಕೆ. ವೆಂಕಟೇಶಮೂರ್ತಿಯವರು ಮಾರುಕಟ್ಟೆಯ ವಿಸ್ತಾರ ವೃದ್ಧಿಯಾದಂತೆ ಹೆಚ್ಚಿದ ಬೇಡಿಕೆಯನ್ನು ಪೂರೈಸಲಿಕ್ಕಾಗಿ 2003ರ ಮೇ 25ರಂದು ಬನಶಂಕರಿಯಲ್ಲಿ ನೂತನ ಕಾಫಿ ಸಂಸ್ಕರಣಾ ಘಟಕವನ್ನು ಸ್ಥಾಪಿಸುವುದರೊಂದಿಗೆ ಸಂಸ್ಥೆಯ ಯಶೋಯಾತ್ರೆ ಮುಂದುವರಿಯಿತು. ಈ ಘಟಕದ ಉದ್ಘಾಟನೆಯನ್ನು ಶ್ರೀ ನಾಗೇಶ್ವರ ಅಡಿಗರೇ ಮಾಡಿರುವುದು ಸ್ಮರಣೀಯ.



ಆರೂವರೆ ದಶಕಗಳ ಅನುಭವ ಸಾಮರ್ಥ್ಯದೊಂದಿಗೆ ವಸಂತ ಕಾಫಿ ಸಂಸ್ಥೆಯು ರಾಜಧಾನಿಯ ಪ್ರಮುಖ ಹೋಟೆಲುಗಳು, ಕ್ಯಾಟ-ರಿಂಗ್ ಸಂಸ್ಥೆಗಳು ಮತ್ತಿತರ ಗ್ರಾಹಕರಿಗೆ ಅತ್ಯುತ್ತಮ ಗುಣಮಟ್ಟದ ಸಾಂಪ್ರದಾಯಿಕ ಸ್ವಾದ ಮತ್ತು ಪರಿಮಳವುಳ್ಳ ಕಾಫಿಪುಡಿಯನ್ನು ನೀಡುತ್ತಾ ಜನಪ್ರಿಯತೆಯ ಹಾದಿಯಲ್ಲಿ ಮುನ್ನಡೆಯುತ್ತಿದೆ.

- ಕಾಫಿಪುಡಿಯ ಉತ್ಪನ್ನಗಳ ಗುಣಮಟ್ಟದ ನಿರಂತರತೆಯನ್ನು ಕಾಯ್ದು ಕೊಳ್ಳುವುದಕ್ಕಾಗಿ ಪ್ರತಿಯೊಂದು ಉತ್ಪನ್ನವನ್ನೂ ಪ್ರಯೋಗಾಲಯದಲ್ಲಿ ಗುಣಮಟ್ಟ ವಿಭಾಗದ ಪರಿಣಿತರಿಂದ ಪರಿವೀಕ್ಷಣೆಗೆ ಒಳಪಡಿಸಲಾಗುವುದು.
- ಸಂಸ್ಥೆಯ ಚಿಲ್ಲರೆ ಮಳಿಗೆಗಳಲ್ಲಿ ಗ್ರಾಹಕರ ಎದುರಿನಲ್ಲೇ ಕಾಫಿ ಪುಡಿಯನ್ನು ತಯಾರಿಸಿ ಪ್ಯಾಕ್ ಮಾಡಿ ನೀಡಲಾಗುವುದು.
- ಹೋಟೆಲುಗಳು, ಕ್ಯಾಟರರ್ಸ್, ಮತ್ತಿತರ ಪ್ರಮುಖ ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ದಿನಂಪ್ರತಿ ನೇರವಾಗಿ ಸರಬರಾಜು ಮಾಡುವ ವ್ಯವಸ್ಥೆ ಇದೆ.
- ನಮ್ಮ ಉತ್ಪನ್ನಗಳು ಚಿಲ್ಲರೆ · ಮಳಿಗೆಗಳಿಗಾಗಿ www.srivasanthcoffeeworks.com/buy@ ಯಲ್ಲಿ ದೊರೆಯುತ್ತವೆ.

**ಏಜಂಟರುಗಳಿಗೆ ಉತ್ತಮ ಕಮಿಷನ್ ನೀಡಲಾಗುವುದು.**

**ನಮ್ಮನ್ನು ಸಂಪರ್ಕಿಸಿ: ಶ್ರೀ ವಸಂತ ಕಾಫಿ ವರ್ಕ್ಸ್**
ಪ್ರಧಾನ ಕಛೇರಿ: ನಂ.40, ವಿಶ್ವೇಶ್ವರಪುರಂ ವೃತ್ತ, ಬೆಂಗಳೂರು-560004
ದೂರವಾಣಿ: 080-26671890, 22425327
E-mail :srivasanthcoffeeworks@yahoo.co.in
srivasanthcoffeeworks@gmail.com

**ಕೈಗಾರಿಕಾ ಘಟಕ ಮತ್ತು ಚಿಲ್ಲರೆ ಮಳಿಗೆ :** ನಂ. 36, 28ನೇ ಕ್ರಾಸ್, ಕೈಗಾರಿಕಾ ಬಡಾವಣೆ, ಬನಶಂಕರಿ 2ನೇ ಹಂತ, ಬೆಂಗಳೂರು-70.
ದೂರವಾಣಿ: 080-26717106 Fax: 080-26711996
Join us : www.srivasanthcoffeeworks.com
www.facebook.com/srivasanthcoffeeworks

'ISHUDHI' Kannada monthly - Printed, Published & Owned by: Veena S. Bhat. Printed at Ishudhi Graphics, 100, 1st Main, 7th Cross, Pavamana Nagar, J.P. Nagar 8th Phase, Bengaluru-560076 & Published from: # 100, 1st Main, 7th Cross, Pavamana Nagar, J.P. Nagar 8th Phase, Bengaluru-560076. E-mail: ishudhi@gmail.com - Editor: Veena S. Bhat. Executive Editor: D. Sharath Kumar